## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳ ಮುದ್ರಣಕ್ಕೆ ಸಂಬಂಧಿಸಿದಂತೆ ಅಲ್ಪಾವಧಿ ಟೆಂಡರ್ ಕರೆಯುವ ಬಗ್ಗೆ

ಓದಲಾಗಿದೆ: (1) ಸರ್ಕಾರದ ಆದೇಶ ಸಂಖ್ಯೆ ಪಿಡಿ 90 ಪಿಎಸ್‌ಡಿ 2014, ದಿ: 12-11-2014.

(2) ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ ಪಿಡಿ 90 ಪಿಎಸ್‌ಡಿ 2014, ದಿ: 28-11-2014.

(3) ದಿನಾಂಕ 01-12-2014 ರಿಂದ 06-12-2014 ರವರೆಗೆ ನಡೆದ ಮುಖ್ಯ ಯೋಜನಾಧಿಕಾರಿಗಳು ಮತ್ತು ಲೀಡ್ ಏಜೆನ್ಸಿಗಳ ಸಭೆಗಳಲ್ಲಿ ಚರ್ಚಿಸಿದಂತೆ.

**ಪ್ರಸ್ತಾವನೆ :**

ಕನ್ನಡ ಹಾಗೂ ಆಂಗ್ಲ ಭಾಷೆಯ ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳ ಮುದ್ರಣ ಹಾಗೂ ವಿತರಣೆ ಕಾರ್ಯವನ್ನು ಆಯಾ ಜಿಲ್ಲೆಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಉಲ್ಲೇಖ(1) ರಲ್ಲಿ ವಹಿಸಲಾಗಿರುತ್ತದೆ.

ಉಲ್ಲೇಖ (2)ರಲ್ಲಿ ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳ ಮುದ್ರಣಕ್ಕೆ ಸಂಬಂಧಿಸಿದಂತೆ ವಿನ್ಯಾಸ, ಗಾತ್ರ, ಪುಟಗಳ ಸಂಖ್ಯೆ ಮತ್ತು ಕಾಗದದ ವಿವರ ನೀಡಿದ್ದು, ಅವುಗಳ ಆಧಾರದ ಮೇಲೆ ಕರ್ನಾಟಕ ಪಾರದರ್ಶಕ ಅಧಿನಿಯಮದನ್ವಯ ಗುಣಮಟ್ಟದ ಮುದ್ರಣಾಲಯಗಳಿಂದ ದರಗಳನ್ನು ಆಹ್ವಾನಿಸಿ ಕ್ರಮಕೈಗೊಳ್ಳಲು ಸೂಚಿಸಲಾಗಿದೆ.

ಮುಂದುವರೆದು, ಉಲ್ಲೇಖ(3)ರ ಚರ್ಚೆಯಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಇವರು ಸೂಚಿಸಿರುವಂತೆ ಡಿಸೆಂಬರ್-2014ರ ಅಂತ್ಯದೊಳಗೆ ಎಲ್ಲಾ 30 ಜಿಲ್ಲೆಗಳ ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳನ್ನು ಮುದ್ರಿಸಿ ಸಾರ್ವಜನಿಕರಿಗೆ ಬಿಡುಗಡೆ ಮಾಡಬೇಕಾಗಿರುತ್ತದೆ. ಸಮಯಾವಕಾಶ ಕಡಿಮೆ ಇರುವುದರಿಂದ ಕರ್ನಾಟಕ ಪಾರದರ್ಶಕ ಅಧಿನಿಯಮ 17(2) ರನ್ವಯ ಅಲ್ಪಾವಧಿ ಟೆಂಡರ್ ಆಹ್ವಾನಿಸಿ ಕ್ರಮಕೈಗೊಳ್ಳುವುದು ಸೂಕ್ತವೆಂದು ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿಗಳು ವಿನಂತಿಸಿರುತ್ತಾರೆ.

ಗುಣಮಟ್ಟ ಕಾಪಾಡುವ ದೃಷ್ಟಿಯಿಂದ ಮುದ್ರಣಾಲಯಗಳ ಅನುಭವ ಹಾಗು ತಾಂತ್ರಿಕ ಸಾಮರ್ಥ್ಯ ನಿರ್ಧರಿಸುವ ಸಲುವಾಗಿ ತಾಂತ್ರಿಕ ಬಿಡ್ (Technical Bid)ನ್ನು ಸಹ ಆಹ್ವಾನಿಸಬೇಕಾಗಿರುತ್ತದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಪಿಡಿ 90 ಪಿಎಸ್‌ಡಿ 2014, ಬೆಂಗಳೂರು, ದಿನಾಂಕ :23-12-2014**

ಪ್ರಸ್ತಾವನೆಯಲ್ಲಿನ ವಿವರಣೆಯ ಹಿನ್ನಲೆಯಲ್ಲಿ, ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳನ್ನು ತ್ವರಿತವಾಗಿ ಮುದ್ರಿಸಿ ವಿತರಿಸಲು ಸಂಬಂಧಿಸಿದ ಜಿಲ್ಲಾ ಪಂಚಾಯತಿಯು ಈ ಕೆಳಕಂಡ ಕ್ರಮಗಳನ್ನು ಕೂಡಲೇ ಕೈಗೊಳ್ಳತಕ್ಕದ್ದು.

....2..